ಕರ್ನಾಟಕ ರಾಜ್ಯ ರಸ್ತೆ ನಿಗಮವನ್ನು ಪ್ರತ್ಯೇಕ ಮಾಡುವ ಬಗ್ಗೆ

೧೬೧ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ) — ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೆಂಗಳೂರು ನಗರ ಸಾರಿಗೆಯನ್ನು ಪ್ರತ್ಯೇಕಿಸಿ, ಪ್ರತ್ಯೇಕ ಸಂಸ್ಥೆಯನ್ನು ರಚಿಸಬೇಕೆಂಬ ಸಲಹೆ ಸರ್ಕಾರದವರ ಗಮನದಲ್ಲಿದೆಯೇ ?

ಆ) ಈ ಹಿಂದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಭಜಿಸಿ ೪ ಭಾಗಗಳಾಗಿ ಪ್ರತ್ಯೇಕ ನಿಗಮದ ರಚನೆ ಬಗ್ಗೆ, ಸರ್ಕಾರದವರು ಪರಿಶೀಲಿಸಿದ್ದರೆ ?

ಇ) ಧಾರವಾಡ–ಬೆಳಗಾಂ–ರಾಯಚೂರು– ಬಿಜಾಪುರ ಜಿಲ್ಲೆಗಳ ಡಿಪೋಗಳು ಲಾಭದಾಯಕ ಸ್ಥಿತಿಯಲ್ಲಿದ್ದು, ಈ ಜಿಲ್ಲೆಗಳಿಗೆ ಪ್ರತ್ಯೇಕ ಸಂಸ್ಥೆ ರಚಿಸಲು ಆಲೋಚಿಸಲಾಗುವುದೇ ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಸಾರಿಗೆ ಮತ್ತು ಬಂದೀಖಾನೆ ಮಂತ್ರಿಗಳು) —

ಅ) ಪ್ರಶ್ನೆ ಇಲ್ಲ.
ಆ) ಇಲ್ಲ.
ಇ) ಇಲ್ಲ.

ಕೇಂದ್ರ ಸರ್ಕಾರದವರಿಗೆ ಸೊಗಲ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಲು ರಾಜ್ಯ ಸರ್ಕಾರದವರಿಂ ಶಿಫಾರಸ್ಸು ಮಾಡುವ ಬಗ್ಗೆ

೧೬೬ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆಯಲ್ಲಿರುವ 'ಸೊಗಲ' ಕ್ಷೇತ್ರವನ್ನು ಕೇಂದ್ರ ಸರ್ಕಾರಕ್ಕೆ ಪ್ರವಾಸಿ ತಾಣವೆಂದು ಪರಿಗಣಿಸಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದವರು ಸಲಹೆ ಮಾಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಕೇಂದ್ರ ಸರ್ಕಾರದವರು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಇ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಹೊಸ ಸ್ಥಳಗಳನ್ನು ಕೇಂದ್ರ ಸರ್ಕಾರದವರಿಂ ಪ್ರವಾಸಿ ಕೇಂದ್ರವಾಗಿ ಪರಿಗಣಿಸಿ ಅಭಿವೃದ್ಧಿ ಕ್ರಮ ಕೈಗೊಂಡಿದ್ದಾರೆಯೇ ? ಹಾಗಿದ್ದಲ್ಲಿ, ಅದರ ವಿವರಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.
ಆ) ಉದ್ಭವಿಸುವುದಿಲ್ಲ.
ಇ) ಹೌದು. ಈ ಕೆಳಕಂಡ ಸ್ಥಳಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದೆ.

೧೯೮೫–೮೬

		(ಅಕ್ಷ ರೂ.ಗಳಲ್ಲಿ)
೧)	ತಲಕಾಡಿನಲ್ಲಿ ಹೆದ್ದಾರಿ ಸೌಲಭ್ಯ	೧.೩೭
೨)	ಜೋಗಜಲಪಾತದಲ್ಲಿ ಹೆದ್ದಾರಿ ಸೌಲಭ್ಯ	೪.೨೫
೩)	ಶೃಂಗೇರಿಯಲ್ಲಿ ಉಪಹಾರ ಗೃಹ	೬.೦೦
೪)	ಬೆಂಗಳೂರು ಅಲಸೂರು ಕೆರೆಯಲ್ಲಿ ದೋಣಿ ವಿಹಾರ ಕೇಂದ್ರ	೫.೦೦

೧೯೮೬–೮೭

೧)	ಮುಳಬಾಗಿಲಿನಲ್ಲಿ ಹೆದ್ದಾರಿ ಸೌಲಭ್ಯ	೧೪.೦೦